ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ವಿಷಯ:** ಕರ್ನಾಟಕ ರಾಜ್ಯದಲ್ಲಿ ಕೊರೋನಾ ವೈರಸ್ (COVID-19) ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಪರಿಹಾರ ಕಲ್ಪಿಸಲು ಅಧಿಕಾರಿ/ನೌಕರರ ಏಪ್ರಿಲ್-2020 ರ ತಿಂಗಳಿನ ವೇತನದಲ್ಲಿ ಎರಡು ದಿನಗಳ ವೇತನವನ್ನು ಕಡಿತಗೊಳಿಸಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ COVID-19 ಗೆ ದೇಣಿಗೆ ನೀಡುವ ಬಗ್ಗೆ.

**ಉಲ್ಲೇಖ:** ಕವಿಮಂ ನೌಕರರ/ಅಧಿಕಾರಿಗಳ ಸಂಘದ ಒಕ್ಕೂಟ ರವರ ಪತ್ರ ಸಂಖ್ಯೆ: ಎಫ್.ಕೆ.ಇ.ಬಿ.ಇ.ಉ.ಎ/2019-20/39 ಮತ್ತು ಎಫ್.ಕೆ.ಇ.ಬಿ.ಇ.ಉ.ಎ/2019-20/40, ದಿನಾಂಕ: 02.04.2020.

***

**ಪೀಠಿಕೆ:**

ರಾಜ್ಯದಲ್ಲಿ COVID-19 ವೈರಾಣು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪರಿಹಾರ ಕಾರ್ಯಗಳಿಗಾಗಿ ದೇಣಿಗೆ ನೀಡುವ ಬಗ್ಗೆ ಕವಿಮಂ ನೌಕರರು/ಅಧಿಕಾರಿಗಳ ಸಂಘದ ಒಕ್ಕೂಟವು ಸಭೆ ನಡೆಸಿ, ಕವಿಪ್ರನಿನಿ/ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ನೌಕರರು/ಅಧಿಕಾರಿಗಳ ಏಪ್ರಿಲ್-2020 ರ ತಿಂಗಳಿನ ವೇತನದಲ್ಲಿ ಎರಡು ದಿನಗಳ ವೇತನವನ್ನು ಕಡಿತಗೊಳಿಸಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ COVID-19 ಗೆ ದೇಣಿಗೆಯಾಗಿ ನೀಡುವಂತೆ ನಿರ್ಣಯಿಸಿ, ಈ ಕುರಿತು ನಿಗಮಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಿದೆ:

## ಆದೇಶ ಸಂಖ್ಯೆ: ಕವಿಪ್ರನಿನಿ/ಹಿಸ7/35891/2012-13, ದಿನಾಂಕ: 02.04.2020

ಕರ್ನಾಟಕ ರಾಜ್ಯದಲ್ಲಿ COVID-19 ವೈರಾಣು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾನವಿಯತೆ ದೃಷ್ಟಿಯಿಂದ ಕವಿಪ್ರನಿನಿ/ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ನೌಕರರು/ ಅಧಿಕಾರಿಗಳ **ಏಪ್ರಿಲ್-2020** ರ ತಿಂಗಳಿನ ವೇತನದಲ್ಲಿ **ಎರಡು ದಿನಗಳ ವೇತನವನ್ನು** ಕಡಿತಗೊಳಿಸಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ COVID-19 ಗೆ ದೇಣಿಗೆಯಾಗಿ ನೀಡಲು ಈ ಕೆಳಕಂಡಂತೆ ಆದೇಶಿಸಲಾಗಿದೆ:-

1. ಕವಿಪ್ರನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಸಂಬಂಧಪಟ್ಟಂತೆ, ಎಲ್ಲಾ ವೇತನ ಬಟವಾಡೆ ಅಧಿಕಾರಿಗಳು ಏಪ್ರಿಲ್-2020 ರ ತಿಂಗಳಿನ ವೇತನದಲ್ಲಿ ಎರಡು ದಿನಗಳ ವೇತನವನ್ನು ಕಡಿತಗೊಳಿಸಿ, ಒಟ್ಟು ಮೊತ್ತಕ್ಕೆ ಆರ್ಥಿಕ ಸಲಹೆಗಾರರು(ಲೆಕ್ಕಗಳು ಹಾಗೂ ಸಂಪನ್ಮೂಲ), ಕವಿಪ್ರನಿನಿ ರವರ ಕಚೇರಿಯ ವ್ಯವಸ್ಥಾಪಕರು (ನಗದು ಮತ್ತು ಲೆಕ್ಕಗಳು) ರವರ ಶಾಖೆಗೆ (ಸ್ಥಳ ಸಂಕೇತ-727) ದಿನಾಂಕ: 30.04.2020 ರ ಒಳಗೆ ವರ್ಗಾವಣೆ ಆದೇಶ (Advice of Transfer) ಸಲ್ಲಿಸುವುದು.

2. ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಪಿ.ಸಿ.ಕೆ.ಎಲ್/ಕ್ರೆಡಲ್/ಕೆ.ಎಸ್.ಪಿ.ಡಿ.ಸಿ.ಎಲ್ ಮತ್ತು ಇತರೆ ಸರ್ಕಾರದ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ನೌಕರರು/ಅಧಿಕಾರಿಗಳಿಗೆ ಸಂಬಂಧಪಟ್ಟಂತೆ, ಎಲ್ಲಾ ವೇತನ ಬಟವಾಡೆ ಅಧಿಕಾರಿಗಳು ಏಪ್ರಿಲ್-2020 ರ ತಿಂಗಳಿನ ವೇತನದಲ್ಲಿ ಎರಡು ದಿನಗಳ ವೇತನವನ್ನು ಕಡಿತಗೊಳಿಸಿ, ಒಟ್ಟು ಮೊತ್ತವನ್ನು ದಿನಾಂಕ: 29.04.2020 ರ ಒಳಗೆ ತಮ್ಮ ಕಂಪನಿಗಳ ಆರ್ಥಿಕ ಸಲಹೆಗಾರರು(ಲೆಕ್ಕಗಳು) ಇವರಿಗೆ ತಿಳಿಸುವುದು. ವಿದ್ಯುತ್ ಸರಬರಾಜು

ಕಂಪನಿಗಳ ಆರ್ಥಿಕ ಸಲಹೆಗಾರರು (ಲೆಕ್ಕಗಳು) ಹಾಗೂ ಇತರೆ ಸರ್ಕಾರಿ ಇಲಾಖೆಯ ಮುಖ್ಯಸ್ಥರು ತಮ್ಮ ಕಂಪನಿ/ಕಚೇರಿಗೆ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ತಿಳಿಸಿರುವ ಮೊತ್ತವನ್ನು ಕ್ರೋಢೀಕರಿಸಿ, ಒಟ್ಟು ಮೊತ್ತವನ್ನು ದಿನಾಂಕ: 30.04.2020 ರ ಒಳಗೆ ಕವಿಪ್ರನಿನಿಯ ಬ್ಯಾಂಕ್ ಖಾತೆ ಸಂಖ್ಯೆ: **0413256027055,** ಕೆನರಾ ಬ್ಯಾಂಕ್, ಟೌನ್ ಹಾಲ್ ಶಾಖೆ, ಬೆಂಗಳೂರು ಐ.ಎಫ್.ಎಸ್.ಸಿ.ಕೋಡ್: **CNRB0000413** ಗೆ ಆರ್.ಟಿ.ಜಿ.ಎಸ್(RTGS) ಮೂಲಕ ಜಮೆಗೊಳಿಸಲು ಕ್ರಮ ಕೈಗೊಳ್ಳುವುದು.

3. ಕವಿಪ್ರನಿನಿ, ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಪಿ.ಸಿ.ಕೆ.ಎಲ್, ಕ್ರೆಡಲ್, ಕೆ.ಎಸ್.ಪಿ.ಡಿ.ಸಿ.ಎಲ್ ಮತ್ತು ಇತರೆ ಇಲಾಖೆಗಳಿಂದ ಮೇಲಿನಂತೆ ಕವಿಪ್ರನಿನಿ ಖಾತೆಗೆ ಜಮೆಗೊಂಡ ಮೊತ್ತವನ್ನು ಕ್ರೋಢೀಕರಿಸಿ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿ COVID-19 ಗೆ ದೇಣಿಗೆಯಾಗಿ ನೀಡಲು ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ ರವರು ಸೂಕ್ತ ಕ್ರಮವಹಿಸುವುದು.

**"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿರುತ್ತದೆ"**

2/4/2020

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

   www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.